## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ. ಸಂಃ 293/2022**

| | | |
|---|---|---|
| ಸಾಕ್ಷಿಯ ಹೆಸರುಃ | ನಾಗೇಂದ್ರ | ಫ್ರಾಸಾಃಃ 1 |
| ತಂದೆ ಹೆಸರುಃ | ಬೇಲೂರೇಗೌಡ | ಚಾಸಾಃಃ 1 |
| ವಯಸ್ಸುಃ | 58 ವರ್ಷ | ಪ್ರಮಾಣೀಕರಿಸಿದ<br>ದಿಃ 11/07/2023 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಅಂಬಲಾರೆ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತರ ಪರಿಚಯವಿದೆ. ನನಗೆ ಚಾಸಾ-2 ರಿಂದ 5 ರವರ ಪರಿಚಯ ಇದೆ. ದಿಃ16/01/2022 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಚಾಸಾ-2 ರವರು ಹೊರಗಡೆ ಕೆಲಸಕ್ಕೆಂದು ಬೈಕಿನಲ್ಲಿ ಹೋಗುತ್ತಿದ್ದ. ನಾವು ಆರೋಪಿತರಿಗೆ 10 ಸಾವಿರ ರೂಪಾಯಿ ಹಣವನ್ನು ಕೊಡಬೇಕಾಗಿತ್ತು. ಆಗ 1 ಮತ್ತು 2 ನೇ ಆರೋಪಿತರು ಹಣ ವಾಪಸ್ಸು ಕೊಡುವಂತೆ ಗಲಾಟೆ ಮಾಡಿ, ದನಕರುಗಳನ್ನು ಕಟ್ಟಿಹಾಕಿಕೊಂಡರು. ನಂತರ ನಾನು 15 ದಿವಸ ಕಾಲಾವಕಾಶ ಕೇಳಿದೆ. ಅದಕ್ಕೆ ಅವರು ನನ್ನ ಮತ್ತು ನನ್ನ ಹೆಂಡತಿಯ ಮೇಲೆ ಗಲಾಟೆ ಮಾಡಿದರು. ಬಾಯಿಗೆ ಬಂದಂತೆ ಬೈದರು. ನಾವು ಹಣವನ್ನು ಮರು ಪಾವತಿಸಿದೆವು. ನನ್ನ ಮಗ ಬೈಕಿನಲ್ಲಿ ಹೋಗುತ್ತಿರುವಾಗ 1 ಮತ್ತು 2 ನೇ ಆರೋಪಿತರು ಆತನಿಗೆ ಬೋಳಿಮಗನೇ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿತ ಬೈಕನ್ನು ಅಡ್ಡಹಾಕಿದರು. 2 ನೇ ಆರೋಪಿತ ನನ್ನ ಮಗನಿಗೆ ದೊಣ್ಣೆಯಿಂದ ಬೆನ್ನು ಮತ್ತು ಬಲಗಾಲಿಗೆ, ಬಲಗೈಗೆ ಹೊಡೆದನು. ಆಗ ನನ್ನ ಮಗ ಕೆಳಗೆ ಬಿದ್ದು ಜ್ಞಾನ

ತಪ್ಪಿದನು. ಆಗ ನಮ್ಮ ಊರಿನವರಾದ ಮಂಜ ಎಂಬುವವರು ನನ್ನ ಮಗನನ್ನು ಕಾರಿನಲ್ಲಿ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದನು. ನಂತರ ನಾನು ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು.

ದಿಃ 17/01/2022 ರಂದು ಸಂಜೆ 4.30 ಗಂಟೆ ಸಮಯಕ್ಕೆ ಪೊಲೀಸರು ಸ್ಥಳಕ್ಕೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಸ್ಥಳ ಮಹಜರ್ ಕ್ರಮ ಜರುಗಿಸಿದರು. ಸಾಕ್ಷಿಯು ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ಪೊಲೀಸರು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡರು. ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಇಂದು ನ್ಯಾಯಾಲಯದ ಮುಂದೆ ಇದೆ. ಸದರಿ ದೊಣ್ಣೆಯನ್ನು **ಮು.ಮಾ.1** ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಈ ವಿಚಾರವಾಗಿ ಹೇಳಿಕೆಯನ್ನು ನೀಡಿದ್ದೇನೆ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಮಾನ್ಯ **ಸಸಅ ರವರಿಂದಃ**

ನಾನು ಆರೋಪಿತರಿಗೆ ಚಾಸಾ-5 ರವರ ಸಮಕ್ಷಮ ಸಾಲದ ಹಣವನ್ನು ಮರು ಪಾವಾತಿಸಿರುತ್ತೇನೆ ಎಂದರೆ ಸರಿ. 2 ನೇ ಆರೋಪಿತನಿಗೆ 3 ನೇ ಆರೋಪಿತ ಚಾಸಾ-2 ರವರಿಗೆ ಹೊಡೆಯಲು ಕಮ್ಮಕ್ಕು ನೀಡುತ್ತಿದ್ದನು ಎಂದರೆ ಸರಿ. 2 ನೇ ಆರೋಪಿತ ಚಾಸಾ-2 ರವರ ಬಲ ಮುಂಗೈಗೆ ಮತ್ತು ಬಲಮಂಡಿಗೆ 3 ನೇ ಆರೋಪಿತರ ಕುಮ್ಮಕ್ಕಿನಿಂದ ಪ್ರಚೋದನೆಗೊಂಡು ಹಲ್ಲೆ ಮಾಡಿದ ಎಂದರೆ ಸರಿ. ಆರೋಪಿತರು ನನ್ನನ್ನು ಮುಂದೊಂದು ದಿನ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಸಿ.ಹೆಚ್. ವಕೀಲರಿಂದಃ**

ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಮಗೆ ಓದಲು ಬರೆಯಲು ಬರುತ್ತದೆಯಾ ಎಂದರೆ ಸಹಿ ಮಾಡಲು ಗೊತ್ತು ಎಂದು ನುಡಿಯುತ್ತಾರೆ. ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತು. ದೂರನ್ನು ಠಾಣೆಯಲ್ಲಿ ಬರೆದಿರುತ್ತಾರೆ. ಬರೆದವರ ಹೆಸರು ಗೊತ್ತಿಲ್ಲ. ದೂರನ್ನು ಕನ್ನಡದಲ್ಲಿ ಬರೆದಿದ್ದಾರೆ. 3 ನೇ ಆರೋಪಿತರ ವಿರುದ್ಧ ನಾನು ದೂರನ್ನು ನೀಡಿದ್ದೇನೆ. ಸದರಿ ದೂರಿನಲ್ಲಿ 3 ನೇ ಆರೋಪಿತರ ಬಗ್ಗೆ ಬರೆದಿದ್ದೇನೆ. ನಮ್ಮ ಗ್ರಾಮಕ್ಕೆ ಹತ್ತಿರ ಇರುವ ಆಸ್ಪತ್ರೆಗಳು ಇಲ್ಲ. ನಾವು ಪಿರಿಯಾಪಟ್ಟಣಕ್ಕೆ ಬರಬೇಕೆಂದರೆ ಬೆಟ್ಟದಪುರಕ್ಕೆ ಬಂದು ಬರಬೇಕು ಎಂದರೆ ಸರಿ. ಬೆಟ್ಟದಪುರದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನನ್ನ ಮಗನಿಗೆ ಗಲಾಟೆಯಲ್ಲಿ ರಕ್ತದ ಗಾಯ ಆಗಿತ್ತು. ಬಟ್ಟೆಗೂ ರಕ್ತದ ಕಲೆ ಆಗಿತ್ತು. ಬಟ್ಟೆಯನ್ನು ಪೊಲೀಸರಿಗೆ ನೀಡಿಲ್ಲ. ದೂರಿನಲ್ಲಿ ರಕ್ತಗಾಯವಾಗಿತ್ತು ಎಂದು ತಿಳಿಸಿದ್ದೇನೆ. ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಮಹಜರ್ ಗೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತು. ಘಟನಾ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ನನ್ನ ಮಗ ಪೂರ್ವ ದಿಕ್ಕಿನಲ್ಲಿದ್ದ ಕುಶಲಾನಗರಕ್ಕೆ ಹೋಗುತ್ತಿದ್ದನು. ನನ್ನ ಮಗ ಬಳಸುತ್ತಿರುವ ಬೈಕಿನ ಕಂಪನಿ ಹೆಸರು ಗೊತ್ತಿಲ್ಲ. ನಮ್ಮ ಮನೆಗೂ ಘಟನಾ ಸ್ಥಳಕ್ಕೂ ಸುಮಾರು 50-60 ಅಡಿ ಅಂತರ ಇದೆ. ದೂರನ್ನು ಕೊಟ್ಟ ದಿನ ಬಿಟ್ಟರೇ ಬೇರೆ ದಿನ ಠಾಣೆಗೆ ಹೋಗಿಲ್ಲ. ದೂರನ್ನು ಕೊಟ್ಟ ನಂತರ ಪೊಲೀಸರು ಯಾವುದೇ ಹೇಳಿಕೆ ಪಡೆದಿಲ್ಲ. ಅಂಬಲಾರೆ ಗ್ರಾಮದಿಂದ ಪಿರಿಯಾಪಟ್ಟಣಕ್ಕೆ ಬರಲು ಸುಮಾರು 2 ಗಂಟೆ ಸಮಯ ಬೇಕಾಗುತ್ತದೆ. ಘಟನಾ ಸ್ಥಳದ ಅಕ್ಕಪಕ್ಕ ತುಂಬಾ ಮನೆಗಳು ಇವೆ ಮತ್ತು ತುಂಬಾ ಜನರು ಓಡಾಡುವ ಜಾಗ ಎಂದರೆ ಸರಿ. ಚಾಸಾ-3 ನನ್ನ ಹೆಂಡತಿ. ಚಾಸಾ-4 ನನ್ನ ಮಗನ ಸ್ನೇಹಿತ. ಕಾರಿನಲ್ಲಿ ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ವ್ಯಕ್ತಿಯ ಹೆಸರು ಮಂಜು ಬಿನ್ ಜಗದೀಶ. ಅವರು ನಮ್ಮ ಊರಿನವರು. ಚಾಸಾ-5 ರಿಂದ 9 ರವರು ನಮ್ಮ ಆತ್ಮೀಯರು ಎಂದರೆ ಸರಿ. ಚಾಸಾ-9 ನನ್ನ ಷಡಕ. ಚಾಸಾ-9 ರವರು ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿದರು ಎಂದರೆ ಸರಿಯಲ್ಲ. ಚಾಸಾ-8 ರವರು ಸಹ ನನ್ನ ಷಡಕ. ಚಾಸಾ-8 ಮತ್ತು 9 ರವರು ನನ್ನ ಮಗನನ್ನು ನೋಡಲು ಬಂದಾಗ ತಾವೇ ಸ್ವಯಂ ಪ್ರೇರಿತವಾಗಿ ಮಹಜರ್ ಗೆ ಸಹಿಯನ್ನು ಮಾಡಿರುತ್ತಾರೆ. ಅಕ್ಕಪಕ್ಕದವರು ಎಲ್ಲರೂ ನನ್ನ ವಿರೋಧವಾಗಿರುತ್ತಾರೆ. ಮು.ಮಾ.1 ರಿಂದಲೇ ನನ್ನ ಮಗನಿಗೆ ಹೊಡೆದಿರುತ್ತಾರೆ. ಮು.ಮಾ.1 ನೀಲಗಿರಿ ಮರದ್ದು. ಮು.ಮಾ.1 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ದೊಣ್ಣೆಯ ಮೇಲೆ ನನ್ನ ಮತ್ತು ಸಾಕ್ಷಿದಾರರ ಸಹಿ ಪಡೆದಿಲ್ಲ.

ಪ್ರಶ್ನೆಃ ಮು.ಮಾ.1 ನ್ನು ನೀವು ಏಕೆ ಇಟ್ಟುಕೊಂಡಿದ್ದೀರಿ?

ಉತ್ತರಃ ಅದರಿಂದಲೇ ನನ್ನ ಮಗನಿಗೆ ಹೊಡೆದಿದ್ದು, ನಾನು ಏಕೆ ಇಟ್ಟುಕೊಳ್ಳಲಿ.

ನಮಗೆ ಬೈದಿದ್ದನ್ನು ನಮ್ಮನ್ನು ಬಿಟ್ಟು ಬೇರೆಯವರು ಕೇಳಿಸಿಕೊಂಡಿಲ್ಲ. ಕೊಲೆ ಬೆದರಿಕೆ ಹಾಕಿದ್ದನ್ನು ಬೇರೆಯವರು ಕೇಳಿಸಿಕೊಂಡಿಲ್ಲ. ನಾನು ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಆಗ ಸಮಯ ಸುಮಾರು ಬೆಳಿಗ್ಗೆ 11.30-12.00 ಗಂಟೆ ಆಗಿತ್ತು. ದೂರು ಕೊಟ್ಟ ನಂತರ ಆಸ್ಪತ್ರೆಗೆ ಬಂದಿರುತ್ತೇನೆ. ನಾನು ದೂರು ಕೊಡುವ ಕಾಲಕ್ಕೆ ನನ್ನ ಮಗನನ್ನು ಆಸ್ಪತ್ರೆಗೆ ಕಾರಿನಲ್ಲಿ ಕಳುಹಿಸಿದ್ದೆವು. ಆರೋಪಿತರು ನಾವು ಕೊಡುವ ಸಾಲದ ಹಣವನ್ನು ಕೇಳಿದ್ದಕ್ಕೆ ನಮಗೆ ಅವರ ಮೇಲೆ ದ್ವೇಷ ಇದೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ದನಕರುಗಳನ್ನು ಕಟ್ಟಿಹಾಕಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗನನ್ನು ಅಡ್ಡಗಟ್ಟಿಲ್ಲ, ಯಾವುದೇ ರೀತಿಯ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗಿಲ್ಲದಿದ್ದರೂ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆಯಾದ ದಿನಾಂಕ, ತಿಂಗಳು, ವರ್ಷ ಗೊತ್ತಿಲ್ಲ. ನನ್ನ ಮಗ ಹುಟ್ಟಿದ ದಿನಾಂಕ, ತಿಂಗಳು ಮತ್ತು ವರ್ಷ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**